ಓದುಗರನ್ನೂ, ಪ್ರೇಕ್ಷಕರನ್ನೂ ಏಕಕಾಲಕ್ಕೆ ತಲುಪಬಲ್ಲ ನಾಟಕಗಳನ್ನು ಬರೆಯುವ ಡಿ.ಎಸ್.ಚೌಗುಲೆ ಅವರು ಕನ್ನಡ ಮತ್ತು ಮರಾಠಿ ಭಾಷೆಯ ಮೇಲೆ ಹಿಡಿತ ಹೊಂದಿರುವವರು. ಮರಾಠಿಯ ಪ್ರಸಿದ್ಧ ನಾಟಕಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಚಿಕ್ಕೋಡಿ ತಾಲ್ಲೂಕಿನ ಬೆಡಕಿಹಾಳ್ ಎಂಬ ಹಳ್ಳಿಯಲ್ಲಿ ಜನಿಸಿದ ಅವರು, ಖಾಸಗಿ ಕಾಲೇಜೊಂದರಲ್ಲಿ ಕನ್ನಡ ಉಪನ್ಯಾಸಕರಾಗಿ ನಿವೃತ್ತಿ ಹೊಂದಿದ್ದಾರೆ. ಕಥೆ, ಕಾದಂಬರಿ ಕ್ಷೇತ್ರದಲ್ಲೂ ಕೃಷಿ ಮಾಡಿದ್ದಾರೆ.

ಗುರುಲಿಂಗ ಒಳಗಿಂದ ಚಹಾ ತಗೊಂಡು ಬಂದರು. ರೂಪಾ ಎದ್ದಳು. 'ನೀವ್ ಒಳಗ ಹೋಗ್ತೀರಿ? ಹೋಗರಲ್ಯಾ! ಕಾಯಾಕತ್ಯಾರ...!' ಗುರುಲಿಂಗ ಕೇಳಿದರು. ಗುರುಲಿಂಗ ಹಾಗೂ ಬಸವರಾಜರ ನಡುವೆ ತನ್ನದ್ದೇನು ಕಾಯಕ? ಕಸದೊಳಗೆ ಕರು ಮರೆತಂಗೆ. ತಲೆ ಕೆಳಗೆ ಹಾಕಿ ಒಳಗೆ ಅಡುಗೆ ಕೋಣೆಯತ್ತ ಸಾಗಿದಳು. ಬಸೂ ಮತ್ತು ಅವರ ನಡುವೆ ಕೃಷಿ ಚರ್ಚೆ ಮುಂದುವರೆಯಿತು. ಬಸೂನ ಮನಸ್ಸು ದೇಸಾಯಿವರ ಅಡುಗೆ ಮನೆಯತ್ತ ಸಾಗಿತು. ಅವನ ಲಕ್ಷ್ಯ ಅಲ್ಲಿರಲಿಲ್ಲ. ಬಸವರಾಜ ಹಾಗೆ ಸುಲಭವಾಗಿ ಆಕೆಯನ್ನು ಮರೆಯಲು ಸಾಧ್ಯವಿರಲಿಲ್ಲ. ನಿತ್ಯ ಸ್ಮರಣೆಯಿಲ್ಲದಿದ್ದರೂ ಅಮಾವಾಸ್ಯೆಯಲ್ಲಿ ಹೊಳೆವ ಚುಕ್ಕೆಯ ಮಿಣುಕು, ಹುಣ್ಣಿಮೆಯ ಚಂದಿರನ ಬೆಳಕು ಎಷ್ಟು ಸತ್ಯವೋ ಅಷ್ಟೇ ಖರೆತನದಿಂದ ಆಕೆಯನ್ನು ಮರೆಯದೆ ಇದ್ದ. ಹದಿನೆಂಟರ ಬಾಲೆಯಾಗಿದ್ದಾಗಿನ ರೂಪಾಳ ಚಿತ್ತಾರವನ್ನು ಎದೆ ಅಂಗಳದಲ್ಲಿ ರಂಗೋಲಿಯ ರೂಪದಲ್ಲಿ ಬಿಡಿಸಿಟ್ಟಿದ್ದ.

* * *

ಅದು ಸೊಕ್ಕೆಂದರೆ ಸೊಕ್ಕಲ್ಲ. ಸಿರಿವಂತಿಕೆಯ ಗತ್ತೂ ಅಲ್ಲ. ಒಂದು ನಮೂನೆಯ ಅಲೂಫತನ! ಅದೊಂದು ಸ್ವಭಾವ. ದಟ್ಟ ಕಾನನದ ಕಾಲುರಸ್ತೆಯ ಮಧ್ಯೆ ಗೋಣು ಅತ್ತಿತ್ತ ಹೊರಳಿಸಿ ಪಿಳಿ ಪಿಳಿ ಕಣ್ಣು ಬಿಟ್ಟು ನೋಡುವ ಹುಲ್ಲೆಯ ಗುಣಧರ್ಮದವಳು ರೂಪಾ. ಅಂತರ್ಮುಖಿ ಭಾವ. ಮಾತು ಖರೀದಿ ಮಾಡಿದರೂ ದೊರೆಯದಷ್ಟು ತುಟ್ಟಿ. ದೇಸಾಯಿವರ ಮನೆಯಲ್ಲಿ ಇಂದಿನ ರೂಪಾಳ ರೂಪದ ಮುದ್ರೆ ಪುನಃ ಮನದಲ್ಲಿ ಪ್ರತಿಷ್ಠಾಪನಗೊಳ್ಳುವ ತನಕ ಬಸವರಾಜ ಮನ ಪಟಲದಲ್ಲಿ ಇದ್ದವಳು ಪಿಳಿ ಪಿಳಿ ಕಣ್ಬಿಡುವ ಆ ಹುಲ್ಲೆಯೇ! ಅದೇ ಅವರೆದೆಯಲ್ಲಿ ಇಂಗಿ ರೂಪಗೊಂಡ ಅಚ್ಚು ಸಹ. ಆಕೆಯನ್ನು ಕಾಣಬೇಕೆಂದು ಏತನ್ಮಧ್ಯೆ ಶೋಧಿಸಲು ಯತ್ನಿಸಿದ್ದ. ತನ್ನ ವಿಶ್ವವಿದ್ಯಾಲಯಗಳ ಕಾರ್ಯ ಬಾಹುಳ್ಯದಿಂದ ಆಗಿರಲಿಲ್ಲ.

ಅವರಮ್ಮ ಸರಿತಕ್ಕ ಸುಳಕೋಡದ ಗೌಡರ ಮನೆತನಕ್ಕ ಸೊಸೆಯಾಗಿ ಬಂದವಳು. ಬೆಡಗಿನಹಳ್ಳಿಯ ಬಾಬು ಮಾಸ್ತರರಿಗೆ ಮೂರೂ ಹೆಣ್ಣು ಸಂತಾನಗಳೇ. ಅವರಲ್ಲಿ ಸರಿತಕ್ಕ ಹಿರಿಯಳು. ಎಲ್ಲ ಮಕ್ಕಳ ಲಗ್ನವನ್ನು ಮಹಾರಾಷ್ಟ್ರದ ಬೇರೆ ಬೇರೆ ಮನೆತನಗಳಿಗೆ ಬಾಬು ಮಾಸ್ತರ ಮಾಡಿಕೊಟ್ಟಿರುವರು. ಸರಿತಕ್ಕ ಪಾಳೇಗಾರಿಕೆಯ ಗೌಡಕಿ ವ್ಯವಸ್ಥೆಯಲ್ಲಿ ತಲೆ ಕೆಳಗೆ ಹಾಕಿ ಸಂಸಾರದ ನೊಗ ಹೊತ್ತವಳು. ಅದೋ...! ಎಂಥ ದುರಹಂಕಾರಿ ಗೌಡಕಿ ಅಂದರೆ ರೂಪಾಳ ಇಬ್ಬರು ಚಿಕ್ಕಪ್ಪಂದಿರು ಯಾವಾಗಲೂ ಅಹಂನಲ್ಲೇ ಮುಳುಗಿದ ಗೌಡರ ಕೋಣಗಳು. ಒಬ್ಬಾತ ಮಾತ್ರ ಯಾವ ಹಂಗಿಲ್ಲದ ಒಂದಿಷ್ಟು ಮಾನವ ಪ್ರೇಮಿ.

ಧುಸುಮುಸು ಮಾಡುವ ಸೊಕ್ಕಿದ ಹೊಡಮುರಕಿ ಎಮ್ಮೆ ಸ್ವಭಾವದ ಒಬ್ಬಾತ ರೂಪಾಳ ಚಿಕ್ಕಪ್ಪ ರುದ್ರಗೌಡ. ಅನಾರುಂಡ ದೇಹ ಬೆಳೆಸಿದವ. ಕೊಲ್ಲಾಪುರದಲ್ಲಿ ರಿಯಲ್ ಎಸ್ಟೇಟ್ ಧಂದೆಯ ಕುಳ. ಕೊರಳಲ್ಲಿ ಚಿಕ್ಕ ಪುಟ್ಟ ರುದ್ರಾಕ್ಷಿ ಸರಮಾಲೆ ನಡುವೆ ಚಿನ್ನದ ಎಳೆಗಳು ಕೊರಳ ತುಂಬ. ಅವುಗಳಿಗೆ ತೂಗಿದ ಭಿನ್ನ ವಿಭಿನ್ನ ದೇವರುಗಳ ಲಾಕೆಟ್ಟುಗಳು. ಅಂಗೈಯಲ್ಲಿ ಚುಳುಕಾಗುವ ಲಿಂಗದ ಗುಂಡಗಡಿಗಿ ಬಿಟ್ಟು ತರಾವರಿ ದೇವರುಗಳು. ಕೈ ಬೆರಳುಗಳಲ್ಲಿ ಚಿನ್ನದುಂಗರ. ಇವು ಆತನ ಆಸ್ತಿಯ ಧಿಮಾಕನ್ನು ವಿಜೃಂಭಿಸುವಂಥವು. ಹೊರಗಡೆ ಮಾತಿನ ಗರ್ಜನೆ ಇದ್ದಿರಬಹುದು. ಆದರೆ ಮನೆಯಲ್ಲಿ ಮಾತು ಕಡಿಮೆ. ಮೌನವೇ ತನ್ನ ಇನ್ನೊಂದು ಆಸ್ತಿ ಮಾಡಿಕೊಂಡವ.

ರುದ್ರಗೌಡನ ಅಣ್ಣ ಶಿವನಗೌಡ ಸಹ ಮಿತ